

## ಸಂಭ್ರಮಕ್ಕೆ ಚೆಕ್

ಸುಬ್ಬನ ಫ್ಯಾಕ್ಟರಿಯಲ್ಲಿ ಈ ವರ್ಷ ಹೆಚ್ಚು ನಿವ್ವಳ ಲಾಭ ಬಂದಿತ್ತು. ಈ ಸಂದರ್ಭದಲ್ಲಿ ಏರ್ಪಡಿಸಿದ್ದ ಸಂತೋಷ ಕೂಟದಲ್ಲಿ ತನ್ನ ಸಿಬ್ಬಂದಿಯನ್ನು ಉದ್ದೇಶಿಸಿ ಉತ್ತೇಜನದಿಂದ ಮಾತಾನಾಡುತ್ತಾ, 'ನಿಮಗೆಲ್ಲರಿಗೂ ತಲಾ 50 ಸಾವಿರ ರೂ. ಚೆಕ್ಕನ್ನು ಕೊಡಲು ನಿರ್ಧರಿಸಿದ್ದೇನೆ' ಎಂದ. ಇಡೀ ಸಭೆಯು ಆನಂದ, ಹರ್ಷೋದ್ಗಾರ, ಕೇಕೆ, ಸಂಭ್ರಮಗಳಿಂದ ಬೀಗುತ್ತಿರುವಾಗ, ಸುಬ್ಬ, 'ನೀವು ಇದೇ ಉತ್ಸಾಹದಿಂದ ಕೆಲಸ ಮಾಡಿದರೆ ಮುಂದಿನ ವರ್ಷ ಆ ಚೆಕ್‌ಗೆ ರುಜು ಮಾಡುತ್ತೇನೆ...' ಎಂದಾಗ ಎಲ್ಲರೂ ಪೆಚ್ಚಾದರು.

**ವಿ. ವಿಜಯೇಂದ್ರ ರಾವ್**

## ಚಾರ್ಜ್

ಒಬ್ಬ ಯುವಕ ಏಕಾಂತವನ್ನು ಬಯಸಿ ತನ್ನ ಹುಡುಗಿಯೊಬ್ಬಳನ್ನು ತನ್ನ ಕಾರಿನಲ್ಲಿ ಕಾಡಿಗೆ ಕರೆದುಕೊಂಡು ಹೋದ. ಕಾಡಿನ ಏಕಾಂತದಲ್ಲಿ ಅವನು ಅವಳನ್ನು ಚುಂಬಿಸಬೇಕೆಂದಾಗ ಅವಳು ಹೇಳಿದಳು, 'ಅಸಲಿಗೆ ನಾನೊಬ್ಬ ಕಾಲ್‌ಗರ್ಲ್, ಒಂದು ಚುಂಬನಕ್ಕೆ ಒಂದು ನೂರು ರೂಪಾಯಿ ಚಾರ್ಜ್ ಮಾಡುತ್ತೇನೆ'.
ತನ್ನ ಆಸೆಯನ್ನು ಹತ್ತಿಕ್ಕಿಕೊಳ್ಳಲಾಗದ ಯುವಕ ಒಂದು ನೂರು ಕೊಟ್ಟು ಅವಳನ್ನು ಚುಂಬಿಸಿದ. ನಂತರ ಸಿಗರೇಟೊಂದನ್ನು ಹೊತ್ತಿಸಿ ಸೇದುತ್ತಾ ಆರಾಮವಾಗಿ ಕುಳಿತುಕೊಂಡ.
ಅವನು ಅಲ್ಲಿಂದ ಹೊರಡುವ ಲಕ್ಷಣಗಳು ಕಾಣದಿದ್ದಾಗ ಯುವತಿ ಕೇಳಿದಳು, 'ಇನ್ನು ನಗರಕ್ಕೆ ಹೊರಡೋಣವೆ?'
'ಸರಿ, ಹೊರಡೋಣ, ಆದರೆ ವೃತ್ತಿಯಿಂದ ನಾನೊಬ್ಬ ಟ್ಯಾಕ್ಸಿ ಡ್ರೈವರ್. ಇಲ್ಲಿಂದ ನಗರಕ್ಕೆ ಹೋಗಲು ಒಂದು ಸಾವಿರ ರೂ. ಚಾರ್ಜ್ ಆಗುತ್ತದೆ. ಅಡ್ವಾನ್ಸ್ ನೀಡಿದರೆ ಹೊರಡಬಹುದು' ಎಂದ!

**ಮುರಲೀಧರ ಕುಲಕರ್ಣಿ**



ಚಿತ್ರಗಳು: ಗಣೇಶ ಆಚಾರ್ಯ